

# ಕಾವ್ಯಾರ್ಥ ಚಿಂತನ

ಎಲ್ಲವನ್ನೂ ಹೇಳಿಬಿಡುವುದಕ್ಕೇ
ನಾದರೂ ಅರ್ಥವಿದೆಯೇ ಕಾವ್ಯದಲ್ಲಿ

ಹಿಂಡು ಹಕ್ಕಿಗಳು ಹಾರುವುದು
ಒಂದೇ ಬಗೆಯ ವಿನ್ಯಾಸದಲ್ಲಿ

ಒಂದು ನೋಟದ ಮಾತು
ಬಹುತ್ವದ ಏಕತಾನತೆಯಲ್ಲಿ

ಮನಸ್ಸು, ಏಕಾಕಿ ತಿರುಗುತ್ತಾ
ಅರಸುವ ಒಂಟಿ ಗರುಡ ಪಕ್ಷಿ

ಹೂತ ಚೆರ್‍ರಿಮರದ ಹಿಂದೆ
ಕೊಂಬೆ ಕಡಿದ ತುಂಬು ಚಂದಿರ

ಎಲ್ಲವೂ ಅನೇಕವೆಂದು
ಕೃತ್ತಿಕೆ ಹುಳುಗಳು ಸುಮ್ಮನೆ ಕಿರಿಚುತ್ತಿವೆ

● ಆರ್. ವಿಜಯರಾಘವನ್